# ಹುಲಿ ಜೊತೆ ಮಕ್ಕಳ ಸೆಲ್ಫೀ

■ ಲಲಿತಾ ಕೆ. ಹೊಸಪ್ಯಾಟಿ



ವಿಜಯ ಕುಮಾರಿ

ಹುಲಿಯನು ನೋಡಲು ಮಕ್ಕಳ ದಂಡು
ಹೊರಟಿದೆ ಕಾಡಲಿ ಹುಡುಕುತ್ತ
ನೀರಿನ ಬಾಟಲಿ ತಿಂಡಿ ಡಬ್ಬಿ
ಮೊಬೈಲ್ ಒಂದು ಕೈಲಿತ್ತ

ವನ್ಯ ಮೃಗಗಳು ಸುಮ್ಮನೆ ಮನುಷ್ಯರ
ಕೊಲ್ಲುವುದಿಲ್ಲ ಗೊತ್ತಂತ
ಬೇಟೆಗೆ ಅಡ್ಡ ಯಾರೇ ಬಂದರೂ
ಬಿಡುವುದಿಲ್ಲ ದಿಟವಂತ

ಕಂಟಿ ಮುಳ್ಳು ಮರ ಸವರುತ
ಇಣುಕಿ ನೋಡಿದರು ಹುಲಿ ಐತ
ಬೆಟ್ಟದ ಮೇಲೆ ಬುತ್ತಿ ಬಿಚ್ಚಿ
ತಿಂಡಿಗೆ ಕುಂತರು ಹಸಿವಂತ

ಬೆಟ್ಟದ ಬುಡದಲಿ ಇಕ್ಕಟ್ಟಾದ ಜಾಗದಿ
ಗುರ್ ಗುರ್ ಸದ್ದು ಕೇಳಿತ್ತ
ಹೆಜ್ಜೆ ಸರಿಸಿ ಸದ್ದು ಮಾಡದೇ
ಬಗ್ಗಿ ನೋಡಿದರು ಏನಂತ

ಗೋಲಿ ಗುಂಡಿನ ಪಿಳಿ ಪಿಳಿ ಕಣ್ಣಿನ
ಪಟ್ಟಾಪಟ್ಟಿ ಹುಲಿ ಅಲ್ಲಿತ್ತ
ಮರಿಹುಲಿಯೊಂದು ಕೊರಳನು ಬಳಸಿ
ತಾಯಿಗೆ ಪಪ್ಪಿ ಕೊಡುತಿತ್ತ

ಕಣ್ಣನು ಬಿಟ್ಟು ಕೋಪದಿ ಕೇಳಿತು
ಏತಕೆ ಬಂದಿರಿ ಇಲ್ಲಿಗೆಂತ
ಗರಿ ಗರಿ ಚಕ್ಕುಲಿ ಪಾಯಸ ಉಂಡಿ
ತಿನ್ನಲು ತಂದೆವು ಮರಿಗಂತ

ಮಕ್ಕಳು ಮರಿ ಎರಡೂ ಒಂದೇ
ಕಲ್ಮಶವಿರದ ಮಾತಂತ
ಮಾಂಸ ಆಹಾರಿ ನನ್ನ ಮರಿ
ತಿನ್ನುವುದಿಲ್ಲ ಸಿಹಿ ಅಂತ

ರುಚಿ ನೋಡಲಿ ತುಸು ತಿನ್ನಲಿ
ಇಷ್ಟವಾಗುವುದು ಮರಿಗಂತ
ಡಬ್ಬಿ ಬಿಚ್ಚಿ ಕೊಟ್ಟೇ ಬಿಟ್ಟರು
ತಿಂದಿತು ಮರಿ ಪಟ್ ಅಂತ

ಬುತ್ತಿ ಬಿಚ್ಚಿ ಕೊಟ್ಟ ಮಕ್ಕಳು
ಹುಲಿಗೆ ಮನವಿ ಮಾಡಿತ್ತ
ಮೊಬೈಲ್ ತಂದೆವು ಸೆಲ್ಫೀ ತೆಗೆವೆವು
ನೆನಪಿಗೆ ಇರಲಿ ನಮಗಂತ

ಮಕ್ಕಳಿಗೇತಕೆ ಮೊಬೈಲ್ ಹುಚ್ಚು
ಕೊಟ್ಟರು ಯಾರು ಹೇಳಿ ಅಂತ
ಕಾಡಲಿ ಮೊಬೈಲ್ ಹಾವಳಿ ಇಲ್ಲ
ಹತ್ತಿರ ತಂದರೆ ಹುಷಾರ್ ಅಂತ

ಮೊಬೈಲ್ ಎಂದಿಗೂ ಮುಟ್ಟದೇ ಇದ್ದರೆ
ಪೋಜು ಕೊಡುವೆ ನಿಮಗಂತ
ಗೇಮ್ ಗೀಮು ಚಾಟ್ ಮಾಡಿದರೆ
ಹುಡುಕಿ ಬರುವೆ ಮನೆಗಂತ

ಹುಲಿಯ ಮಾತು ಫಲಿಸೇ ಬಿಟ್ಟಿತು
ಬೆದರಿ ನಿಂತರು ಕಿಸ್ಸಂತ
ಮೀಸೆ ತಿದ್ದಿ ಮರಿ ಹೇಳಿತು
ಸೆಲ್ಫೀ ಬಂದಿದೆ ಮಸ್ತಂತ

ಮಕ್ಕಳು ಫೋಟೊ ಫಾರ್ವರ್ಡ ಮಾಡಿ
ಹುಲಿಯ ಕತೆ ಬರೆದಾಯ್ತು
ಮೊಬೈಲ್ ಮುಟ್ಟದ ಮಕ್ಕಳ ಕಂಡು
ಅಪ್ಪ ಅಮ್ಮಗೆ ಖುಶಿ ಆಯ್ತು

# ರಜೆಯಲಿ ಮೋಜು



ವಿಜಯ ಕುಮಾರಿ

ಬೇಸಿಗೆ ರಜೆಯಲಿ ಅಮ್ಮನ ಸಂಗಡ
ಅಜ್ಜಿಯ ಮನೆಗೆ ಹೋಗುವೆನು
ಅಜ್ಜಿಯ ಮನೆಯ ಗೆಳೆಯರ ಜೋಡಿ
ಶಾಲೆಯ ಮರೆತು ಆಡುವೆನು.

ಹಳ್ಳಿಯ ಊರದು ಎಂತಹ ಚಂದ
ಪೇಟೆಯ ಗದ್ದಲ ಅಲ್ಲಿಲ್ಲ
ಎತ್ತಿನ ಬಂಡಿಯ ಪಯಣವು ಅಲ್ಲಿ
ಕಾರು ಬಸ್ಸುಗಳ ಹೊಗೆಯಿಲ್ಲ.

ದಿನವೂ ಗೆಳೆಯರು ಆಟಕೆ ಕರೆಯಲು
ಕುಣಿ ಕುಣಿದಾಡುತ ಓಡುವೆನು
ಬೆಟ್ಟವ ಹತ್ತಿ ಅಡವಿಯ ಸುತ್ತಿ
ಕಾಡಿನ ಹಣ್ಣನು ಸವಿಯುವೆನು

ದಿನ ಹೊಸ ಆಟ ಅದರಲಿ ಪಾಠ
ಮಿತ್ರರ ಸಂಗಡ ಕಲಿಯುವೆನು
ದಿನ ದಿನ ಅಜ್ಜಿಯ ಕಾಡಿಸಿ ನಾನು
ಹೊಸ ಕತೆಯನ್ನು ಕೇಳುವೆನು

ಗಿಡಮರ ಏರುತ ಕೆರೆಯಲಿ ಈಜುತ
ಹಕ್ಕಿಯ ಹಾಗೆ ನಲಿಯುವೆನು
ರಜೆಯದು ಮುಗಿಯಲು ಅಮ್ಮನ ಜೊತೆಯಲಿ
ಬೇಸರದಿಂದಲೇ ಮರುಳುವೆನು.

■ ವೆಂಕಟೇಶ ಬೈಲೂರು